# 9

# ಸತ್ಯವೇ ಹೊರತು

ಎರಡನೇ ಯೋಹಾನ ಸಹ ಸತ್ಯವೇದದಲ್ಲಿರುವ ಒಂದೇ ಒಂದು ಅಧ್ಯಾಯವಿರುವ ಒಂದು ಪತ್ರಿಕೆಯಾಗಿದೆ. ಅದು ಸತ್ಯವೇದದಲ್ಲಿನ ಅತಿ ಸಣ್ಣ ಅಧ್ಯಾಯವಾಗಿದೆ.[1] 3ನೇ ಯೋಹಾನ ಹದಿನಾಲ್ಕು ಫಿಲೆಮೋನ ಹಾಗೂ ಯೂದ ತಲಾ ಇಪ್ಪತ್ತೈದು ವಚನಗಳನ್ನು ಹೊಂದಿದ್ದರೆ, ಎರಡನೇ ಯೋಹಾನ ಹದಿಮೂರು ವಚನಗಳನ್ನು ಹೊಂದಿರುತ್ತದೆ. ಹಳೇ ಒಡಂಬಡಿಕೆಯ ಒಬದ್ಯ ಇಪ್ಪತ್ತೊಂದು ವಚನಗಳನ್ನು ಹೊಂದಿದೆ. ಎರಡು ಯೋಹಾನ ಚಿಕ್ಕ ಪುಸ್ತಕವಾದರು, ಸತ್ಯದ ಕುರಿತಾದ ದೊಡ್ಡ ಸಂದೇಶವನ್ನು ಹೊಂದಿರುತ್ತದೆ.

ಅಮೇರಿಕೆಯ ನ್ಯಾಯಾಲಯವು "ಪೂರ್ಣ ಸತ್ಯವನ್ನೆ" ಕೇಳಲು ಬಯಸುತ್ತದೆ. ಸಭೆಯು ಸಹ ಪೂರ್ಣ ಸತ್ಯವನ್ನೇ ಹೇಳಬೇಕು. ಈ ಪ್ರಪಂಚವು ಸತ್ಯದ ಕುರಿತಾದ ಪ್ರಶ್ನೆಯನ್ನು ಹೊಂದಿದ್ದು, ಅದಕ್ಕೆ ಪೂರ್ಣ ಸತ್ಯದ ಅರಿವಿನ ಅಗತ್ಯವಿದೆ. 2 ಯೋಹಾನ ಇದಕ್ಕೆ ಉತ್ತರವನ್ನು ಹೊಂದಿದೆ.

## ಸಮಸ್ಯೆ: ಸತ್ಯದ ಅರಿವಿನ ಕೊರತೆ

ಈ ದಿವಸಗಳಲ್ಲಿ ಕ್ರೈಸ್ತವ್ಯದಲ್ಲಿ ಸತ್ಯದ ಪ್ರಾಮುಖ್ಯತೆಯು ಒತ್ತಿ ಹೇಳದಿರುವುದು ಕಾಣಿಸಿಕೊಳ್ಳುತ್ತದೆ.

### ಇತರರಲ್ಲಿ

ಒಂದು ಕಾಲದಲ್ಲಿ ಧಾರ್ಮಿಕ ಚರ್ಚೆಗಳು ಸಹಜವಾಗಿದ್ದವು, ಆದರೆ ಈ ದಿನಗಳಲ್ಲಿ ಧರ್ಮಗಳ ಅನೇಕ ಗುಂಪುಗಳು "ಸಿದ್ದಾಂಥಗಳ" ಬಗ್ಗೆ ಆಲೋಚಿಸುವದೇ ಇಲ್ಲ.[2] ಪ್ರತಿಯೊಬ್ಬರು ತಮ್ಮದೇ ಆದ "ಸತ್ಯ"ಗಳನ್ನು ಹೊಂದಿದ್ದಾರೆ ಎಂದು ಹೇಳುತ್ತಾರೆ. ನಿನ್ನ ಸತ್ಯ, ನನ್ನ ಸತ್ಯ, ಹಾಗೂ ಇತರರ ಸತ್ಯ ಎಂದು ಹೇಳುತ್ತಾರೆ ನೀನು ನಿನ್ನ ಸತ್ಯದಲ್ಲಿ ಸಂತೃಪ್ತಿಗೊಳ್ಳಬೇಕು ಎಂದು ನಿರ್ಣಯಿಸುತ್ತಾರೆ. (ಪಾಶ್ಚಿಮಾತ್ಯರು ಇಂಥಹ "ನಿಜವಾದ ಒಂದು ಸತ್ಯವಿದೆಯೇ" ಎಂಬುದನ್ನು ಸಂಶಯಿಸುತ್ತಾರೆ!)

### ಸಭೆಯಲ್ಲಿ

ಸಭೆಗಳಲ್ಲಿಯೂ ಸಹ "ಸತ್ಯದ ಕುರಿತಾದ ಪ್ರಬೋಧನೆಯ ಕೊರತೆಗಳಿವೆ." ಸಭೆ ಸದಸ್ಯರುಗಳು "ಪರಿಪೂರ್ಣವಾದ ಸತ್ಯದ ಕುರಿತು" ಅಲಕ್ಷ್ಯ ಭಾವನೆ ಹೊಂದಿದ್ದಾರೆ "ಸತ್ಯವೇದವನ್ನು ಅನುಸರಿಸದವರ ಬಗ್ಗೆ" ಕೀಳಾಗಿ ಮಾತನಾಡಬೇಡಿ, ಎಂಬ ಅಪ್ಪಣೆಗಳಿವೆ, ಯಾಕೆಂದರೆ ಅವರೆಲ್ಲರೂ ತಮ್ಮದೇ ಆದ ಸತ್ಯವನ್ನು ಹೊಂದಿದ್ದಾರೆ ನಮ್ಮ ಸತ್ಯ ಸಿದ್ದಾಂಥಗಳು ನಮಗೆ, ಅವರ ಸತ್ಯಗಳು ಅವರಿಗೆ ಒಳ್ಳೆಯದನ್ನು ಮಾಡುತ್ತವೆ ಎಂದು ಹೇಳಿಕೊಳ್ಳುತ್ತಾರೆ.

### ಪ್ರಸಂಗಿಗಳ ನಡುವೆ

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರಸಂಗಿಗಳು ಸಹ "ಪೂರ್ಣ ಸತ್ಯವನ್ನು" ಪ್ರಸಂಗಿಸುತ್ತಿರುವದಿಲ್ಲ. ಇತರರ ಮನಸ್ಸನ್ನು ನೋಯಿಸದಂತಹ ಬೋಧನೆಗಳನ್ನು ಅವರು ಮಾಡುತ್ತಾರೆ. ಅವರು ಹೊಂದಾಣಿಕೆಯ ಸುವಾರ್ತೆಯನ್ನು ಸಾರುತ್ತಾರೆ:

*ಯೋಹಾನ 8:24* - ಯೇಸು ಹೇಳಿದ್ದು, "ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲೇ ಸಾಯುವಿರಿ."

*ಅವರ ಹೇಳಿಕೆ:* "ಆತನ ಕುರಿತಾಗಿ, ಅಂದರೆ ಆತನು ಏನಾಗಿರುವನು ಎಂದು ಅರಿಯದಿದ್ದರೆ, ನಿನ್ನ ಈ ಕಾರ್ಯದ ನಿಮಿತ್ತ ನೀನು ನಿರ್ನಾಮವಾಗುತ್ತದೆ."

*ಲೂಕ 13:3* - ಯೇಸು ಹೇಳಿದ್ದು, "ನೀನು ಮಾನಸಾಂತರ ಪಡದಿದ್ದರೆ, ನಾಶ ವಾಗುವಿ."

*ಅವರ ಹೇಳಿಕೆ:* "ಮಾನಸಾಂತರ ಪಡದವನು ಅಪಾಯದ ಅಂಚಿನಲ್ಲಿರುವನು ಕೆಲವು ಪರಿಸ್ಥಿತಿಗಳಲ್ಲಿ ಇದು ಅನ್ವಯಿಸುವದಿಲ್ಲ."

*ಮಾರ್ಕ 16:16* - ಯೇಸು ಹೇಳಿದ್ದು, "ನಂಬಿ ದೀಕ್ಷಾಸ್ಥಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು."

ಅವರ ಹೇಳಿಕೆ: "ದೀಕ್ಷಾಸ್ನಾನ ಮಾಡಿಸಿಕೊಂಡರೆ ರಕ್ಷಣೆ ನಂಬದವನು ನಾಶ ವಾಗುವನು."

ಈ ಪ್ರಸಂಗಿಗಳು ಕೃಪೆ, ಪ್ರೀತಿ, ಕ್ರೈಸ್ತ ಮನೋಭಾವ ಹಾಗೂ ಒಳ್ಳೆಯ ಕ್ರಿಯೆಗಳ ಬಗ್ಗೆ ಆಲೋಚಿಸಬಹುದು. ಎಂದು ಹೇಳುವುದು ಒಳ್ಳೆಯದೇ. ಆದಾಗ್ಯೂ ಸತ್ಯವನ್ನು ಬೋಧಿಸಿ ಸುಳ್ಳ ಬೋಧನೆಗಳನ್ನು ನಿರಾಕರಿಸಬೇಕು. ಸತ್ಯವನ್ನು, ಪೂರ್ಣ ಸತ್ಯವನ್ನು ಮಾತ್ರವೇ ಪ್ರಸಂಗಿಸಬೇಕು.

## ಪರಿಹಾರ: 2 ಯೋಹಾನದ ಸಂದೇಶ

ಎರಡನೇ ಯೋಹಾನದಲ್ಲಿ ಸತ್ಯವನ್ನು ಒತ್ತಿಹೇಳಲಾಗಿದೆ. ಎಂದು ಅಪೊಸ್ತಲನು ಬರೆದನು,

ಸಭೆಯ ಹಿರಿಯನು ದೇವರಾದುಕೊಂಡವರಾದ ಅಮ್ಮನವರಿಗೂ ಆಕೆಯ ಮಕ್ಕಳಿಗೂ ಬರೆಯುವದೇನಂದರೆ - ನಮ್ಮಲ್ಲಿ ನೆಲೆಗೊಂಡಿರುವಂಥ ಮತ್ತು ಸದಾಕಾಲವೂ ನಮ್ಮೊಂದಿಗಿರುವಂಥ ಸತ್ಯದ ನಿಮಿತ್ತ ನಾನು ನಿಮ್ಮನ್ನು ಸತ್ಯವಾಗಿ ಪ್ರೀತಿಸುತ್ತೇನೆ; ನಾನು ಮಾತ್ರವಲ್ಲದೆ ಸತ್ಯವನ್ನು ತಿಳಿದಿರುವವರೆಲ್ಲರೂ ನಿಮ್ಮನ್ನು ಪ್ರೀತಿ ಸುತ್ತಾರೆ. ತಂದೆಯಾದ ದೇವರಿಂದಲೂ ಆ ತಂದೆಯ ಮಗನಾದ ಯೇಸು ಕ್ರಿಸ್ತನಿಂದಲೂ ಕೃಪೆಯೂ ಕರುಣೆಯೂ ಶಾಂತಿಯೂ ಸತ್ಯಪೂರ್ವಕವಾಗಿಯೂ ಪ್ರೀತಿ ಪೂರ್ವಕವಾಗಿಯೂ ನಮ್ಮೊಂದಿಗಿರುವವು.

ನಿನ್ನ ಮಕ್ಕಳಲ್ಲಿ ಕೆಲವರು ತಂದೆಯಿಂದ ನಮಗುಂಟಾದ ಆಜ್ಞಾನುಸಾರ ಸತ್ಯವಂತರಾಗಿ ನಡೆಯುವದನ್ನು ಕಂಡು ಬಹಳ ಸಂತೋಷವುಳ್ಳವನಾದೆನು. ಅಮ್ಮನವರೇ, ನಾನು ಹೊಸ ಆಜ್ಞೆಯನ್ನು ನಿಮಗೆ ಬರೆಯದೆ ಮೊದಲಿಂದಲೂ ನಮಗೆ ಬಂದ ಆಜ್ಞೆಯನ್ನು ಬರೆಯುವವನಾಗಿ - ನಾವು ಒಬ್ಬರನ್ನೊಬ್ಬರು ಪ್ರೀತಿಸುವವರಾಗಿರೋಣ ಎಂದು ನಿನ್ನನ್ನು ಕೇಳಿಕೊಳ್ಳುತ್ತೇನೆ. ದೇವರ ಆಜ್ಞೆಗಳನ್ನು ಅನುಸರಿಸಿ ನಡೆಯುವದೇ ಪ್ರೀತಿ; ಪ್ರೀತಿಯಲ್ಲಿ ನಡೆಯಬೇಕೆಂಬದೇ ನೀವು ಮೊದಲಿಂದಲೂ ಕೇಳಿದ ಅಪ್ಪಣೆಯಾಗಿದೆ.

ಮನುಷ್ಯನಾಗಿ ಬಂದಿರುವ ಯೇಸು ಕ್ರಿಸ್ತನನ್ನು ಒಪ್ಪದೆ ಇರುವ ಮೋಸಗಾರರು ಅನೇಕ ಮಂದಿಹೊರಟು ಲೋಕ ದೊಳಗೆ ಹೋಗಿದ್ದಾರೆ. ಯೇಸುವನ್ನು ಒಪ್ಪದವನು ಮೋಸಗಾರನೂ ಕ್ರಿಸ್ತವಿರೋಧಿಯೂ ಆಗಿದ್ದಾನೆ. ನಾವು ಪ್ರಯಾಸಪಟ್ಟು ಮಾಡಿದವುಗಳನ್ನು ನೀವು ಕಳಕೊಳ್ಳದೆ ಪೂರ್ಣಫಲವನ್ನು ಹೊಂದುವಂತೆ ಜಾಗರೂಕರಾಗಿರಿ. ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ

ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು. ಈ ಉಪ ದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ.

ನಿಮಗೆ ಬರೆಯುವದಕ್ಕೆ ನನಗೆ ಅನೇಕ ಸಂಗತಿಗಳಿದ್ದರೂ ಅವುಗಳನ್ನು ಮಸಿಯಿಂದ ಕಾಗದದ ಮೇಲೆ ಬರೆದು ತಿಳಿಸುವದಕ್ಕೆ ನನಗೆ ಮನಸ್ಸಿಲ್ಲ. ನಾನು ನಿಮ್ಮ ಬಳಿಗೆ ಬಂದು ನಿಮ್ಮ ಸಂಗಡ ಮುಖಾಮುಖಿಯಾಗಿ ಮಾತಾಡುವೆನೆಂದು ನಿರೀಕ್ಷಿಸುತ್ತೇನೆ.

ಆಗ ನಿಮ್ಮ ಸಂತೋಷವು ಪರಿಪೂರ್ಣವಾಗುವದು. ದೇವರಾದು ಕೊಂಡವಳಾದ ನಿನ್ನ ಸಹೋದರಿಯ ಮಕ್ಕಳು ನಿನಗೆ ವಂದನೆಹೇಳುತ್ತಾರೆ.

ಈ ಪುಸ್ತಕದಲ್ಲಿ ಮೂರು ಸಂಗತಿಗಳನ್ನು ಎತ್ತಿ ಹೇಳಲಾಗಿದೆ. (1) ಮೊದಲ ನಾಲ್ಕು ವಚನಗಳಲ್ಲಿ "ಸತ್ಯ" ಎಂಬ ಪದವನ್ನು ಐದು ಸಾರಿ ತಿಳಿಸಲಾಗಿದೆ. (2) 4 ರಿಂದ 6ರಲ್ಲಿ "ಆಜ್ಞೆ" ಎಂಬ ಪದವನ್ನು ನಾಲ್ಕು ಸಾರಿ ತಿಳಿಸಿದೆ. (3) ವಚನ 9 ಹಾಗೂ 10ರಲ್ಲಿ ("ಬೋಧನೆ"; KJV) ಎಂಬ ಪದವನ್ನು ಮೂರು ಸಾರಿ, ತಿಳಿಸಿದೆ. "ಸತ್ಯ," "ಆಜ್ಞೆ," ಹಾಗೂ "ಬೋಧನೆ," ಎಂಬ ಪದಗಳನ್ನು ಹನ್ನೆರಡು ಸಾರಿ ತಿಳಿಸಲಾಗಿದೆ. ಕ್ರೈಸ್ತರಿಗೆ ಇರಬೇಕಾದ ಮೂರು ಗುರಿಗಳನ್ನು ಈ ಪುಸ್ತಕದಲ್ಲಿ ತಿಳಿಸಿದೆ.

## ಸತ್ಯದಲ್ಲಿ ನಡೆಯಲು ಒಂದು ಸವಾಲು

ಮುನ್ನಡಿಯ ಪ್ರಕಾರ, ಈ ಪತ್ರಿಕೆಯನ್ನು ಒಬ್ಬ ಹಿರಿಯನು ಬರೆದಿರುವನು ಒಂದು ವೇಳೆ ಅಪೊಸ್ತಲನಾದ ಯೋಹಾನನೇ ಆ ಹಿರಿಯನಾಗಿರಬಹುದು. ಆತನ ಅಧಿಕಾರ ಹಾಗೂ ವಯಸ್ಸನು ತಿಳಿಸುವ ಸೂಚನೆ ಇರಬಹುದು. ದೇವರಾದುಕೊಂಡ ಅಮ್ಮನವರಿಗೂ, ಆಕೆಯ ಮಕ್ಕಳಿಗೂ ಬರೆಯಲಾಗಿದೆ (2 ಯೋಹಾನ 1). ಒಬ್ಬ ಸ್ತ್ರೀ ಹಾಗೂ ಆಕೆಯ ಮಕ್ಕಳು ಎಂದಿದ್ದರೂ, ಸಭೆ ಹಾಗೂ ಸಭೆಯವರಿಗೂ ಸಂಬಂಧ ಪಟ್ಟಿರಬಹುದು. ದೇವರಾದುಕೊಂಡ ಮಹಿಳೆ ಅಥವಾ ಸಭೆ ಏನೇ ಇದ್ದರೂ, ಮೂಲ ಸಂದೇಶವು ಒಂದೇ ಆಗಿರುತ್ತದೆ. ಸತ್ಯದ ಸಂಬಂಧವು ಆಧ್ಯತೆಯಾಗಿರುತ್ತದೆ.

ಅವರ ಹಾಗೂ ಸತ್ಯದ ಬಗ್ಗೆ ಯೋಹಾನನ ಹೇಳಿಕೆಯನ್ನ ಗಮನಿಸಿ: (1) ಸತ್ಯದಲ್ಲಿ ಅವರನ್ನು ಪ್ರೀತಿಸಿದನು (ವಚನ 1). (2) ಸತ್ಯವನ್ನು ಅರಿತಿದ್ದ ಇತರರು ಅವರನ್ನು ಪ್ರೀತಿಸಿದರು. (3) ಸತ್ಯ ಮತ್ತು ಪ್ರೀತಿಯನ್ನು ಒಳಗೊಂಡ, ತಂದೆ ಮಗನಿಂದ ವಂದನೆಯನ್ನು ತಲುಪಿಸಿದನು (ವಚನ 3). (4) ಆಕೆಯ ಮಕ್ಕಳು ಸತ್ಯದಲ್ಲಿ ಬೆಳೆದಿದ್ದರಿಂದ ಅವನು ಸಂತೋಷಿಸಿದನು (ವಚನ 4),[4] ಆದರೆ ಕೆಲವರು ಬೆಳೆಯಲಿಲ್ಲ.

"ಸತ್ಯದಲ್ಲಿ ನಡೆಯುವದು" ಎಂದರೇನು? ತಾನೇ ಸತ್ಯವೆಂದು ಯೇಸು ತಿಳಿಸಿರುವನು (ಯೋಹಾನ 14:6). ತನ್ನಿಂದ ಹಾಗೂ ತಾನು ಕಳುಹಿಸಿಕೊಟ್ಟವರಿಂದ ಪ್ರಚಾರವಾದ ಸತ್ಯ ಎಂದಿರುತ್ತದೆ. ತನ್ನ ಶಿಷ್ಯರ ಕುರಿತು ಯೇಸು, "ಅವರನ್ನು ಸತ್ಯದಿಂದ ಶುದ್ಧ ಮಾಡು" ಎಂದು ಪ್ರಾರ್ಥಿಸಿದನು (ಯೋಹಾನ 17:17). ದೇವರ ವಾಕ್ಯವನ್ನು ಅನುಸರಿಸುವದೇ, ಸತ್ಯವಾಗಿದೆ. ಸತ್ಯವನ್ನು ತಿಳಿಯುವದು ಮಾತ್ರವಲ್ಲದೆ, ದೇವರ ವಾಕ್ಯವನ್ನು ಅರಿಯುವದೇ ಆಗಿದೆ, ಅದರಂತೆ ಜೀವಿಸಿ, ವಿಧೇಯರಾಗಿ, ಅದರಂತೆ ಆರಾಧಿಸುವದೇ ಸತ್ಯವಾಗಿದೆ.

ಸತ್ಯದಲ್ಲಿ ನಡೆಯುವದು ಪ್ರಮುಖವಾಗಿದೆ. ನೀನು ನಿರೀಕ್ಷಿಸುವದಾದರೂ ಏನು? ನಿನ್ನ ಕುಟುಂಬಕ್ಕಾಗಿ ಏನನ್ನು ಬಯಸುತ್ತಿ? ಸಭೆಯಲ್ಲಿರುವ ಸಹೋದರ ಸಹೋದರಿಯರಿಗಾಗಿ ನಿನ್ನಲ್ಲಿರುವ ಆಕಾಂಕ್ಷೆ ಏನು? ಅವರೆಲ್ಲರು ಸತ್ಯದಲ್ಲಿ ನಡೆಯಬೇಕು ಎಂಬದಲ್ಲವೇ? ನಮ್ಮವರೆಲ್ಲರೂ "ಸತ್ಯದಲ್ಲಿ" ನಡೆಯುವಾಗ, ಯೋಹಾನನಿಗೆ ಉಂಟಾದ ಆನಂದವು ನಮಗೆ

ಉಂಟಾಗುವದಿಲ್ಲವೇ? (2 ಯೋಹಾನ 4).

## ಆಜ್ಞೆಗಳನ್ನು ಪಾಲಿಸಲು ಒಂದು ಸವಾಲು

ದೇವರಾದುಕೊಂಡ ಮಹಿಳೆ ಹಾಗೂ ಆಕೆಯ ಮಕ್ಕಳು ಸತ್ಯದಲ್ಲಿ ನಡೆದಿದ್ದರಿಂದ ಅವನಿಗೆ ಆನಂದವಾದಾಗ, ಅವನು ಒಂದು ಮನವಿಯನ್ನು ಅವರ ಮುಂದೆ ಇಟ್ಟನು:

> ಅಮ್ಮನವರೇ, ನಾನು ಹೊಸ ಆಜ್ಞೆಯನ್ನು ನಿಮಗೆ ಬರೆಯದೆ ಮೊದಲಿಂದಲೂ ನಮಗೆ ಬಂದ ಆಜ್ಞೆಯನ್ನು ಬರೆಯುವವನಾಗಿ-ನಾವು ಒಬ್ಬರನ್ನೊಬ್ಬರು ಪ್ರೀತಿಸುವವರಾಗಿ ರೋಣ ಎಂದು ನಿನ್ನನ್ನು ಕೇಳಿಕೊಳ್ಳುತ್ತೇನೆ (2 ಯೋಹಾನ 5).

ಪ್ರೀತಿಸಬೇಕೆಂಬ ಆಜ್ಞೆಯನ್ನು ಅವರು ಪಾಲಿಸಬೇಕೆಂದು ಹೇಳಿದನು. ಈಗಾಗಲೇ ಯೇಸು ಇದನ್ನು ನೀಡಿದ್ದರಿಂದ ಅದು, ಹೊಸ ಆಜ್ಞೆಯಾಗಿರಲಿಲ್ಲ (ಯೋಹಾನ 13:34, 35). ಅವರು ಕ್ರೈಸ್ತರಾದ ದಿನದಿಂದ ಪ್ರೀತಿಯ ಕುರಿತಾಗಿ ಕೇಳಲ್ಪಟ್ಟಿದ್ದರು.

ಪದ್ಧತಿಯ ಮೇರೆಗೆ ಅವರು ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂದು ನೆನಪು ಮಾಡಿದನು:

> ದೇವರ ಆಜ್ಞೆಗಳನ್ನು ಅನುಸರಿಸಿ ನಡೆಯುವದೇ ಪ್ರೀತಿ; ಪ್ರೀತಿಯಲ್ಲಿ ನಡೆಯಬೇಕೆಂಬದೇ ನೀವು ಮೊದಲಿಂದಲೂ ಕೇಳಿದ ಅಪ್ಪಣೆಯಾಗಿದೆ (2 ಯೋಹಾನ 6).

"ಪ್ರೀತಿ ಅಂದರೆ ಏನು?" ಎಂದು ಯೋಹಾನನಿಗೆ ನಾವುಗಳು ಕೇಳುವದಾದರೆ ದೇವರ ಆಜ್ಞೆಗಳನ್ನು ಪಾಲಿಸಿರಿ ಎಂಬದು ಅವನ ಉತ್ತರವಾಗಿದೆ. ಪ್ರೀತಿಯ ನಿಖರತೆಯನ್ನು ಯೋಹಾನನು ಒತ್ತಿ ಹೇಳಿರುವನು.

ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಯೋಹಾನನ ಆಜ್ಞೆಯನ್ನು ಅನೇಕರು ಮಾನ್ಯಮಾಡಿದ್ದರು. ಇನ್ನು ಕೆಲವರು ಇದೇ ಆಧ್ಯತೆಯೆಂದು ತಿಳಿದಿರಲೂ ಬಹುದು. ಈ ಸಿದ್ಧಾಂತವು ಸರಿ ಎನಿಸಿದರೂ, "ಪ್ರೀತಿಸುವದೇ" ಒಂದು ಪ್ರಮುಖ ಆಜ್ಞೆ ಎಂದು ತಿಳಿದಿರುವಿರಾ?

ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬ ಆಜ್ಞೆಯ ಸಂಗಡ, ಇತರ ಆಜ್ಞೆಗಳು ಸಹ ಇರುತ್ತವೆ ಎಂದು ವಚನ 6ರಲ್ಲಿ ಗಮನಿಸುತ್ತೇವೆ. "ಆತನ *ಆಜ್ಞೆಗಳ* ಪ್ರಕಾರ ನಡೆಯಿರಿ ಎಂಬ ಬಹು ಪದದ ಬಳಕೆ ಮಾಡಲಾಗಿದೆ" (ಒತ್ತಿ ಹೇಳಿದ್ದು ನನ್ನದು). ಒಬ್ಬರನ್ನೊಬ್ಬರು ಪ್ರೀತಿಸಿರಿ ಎಂಬದು ಒಂದೇ ಆಜ್ಞೆಯಾಗಿದ್ದರೂ, ಇತರೆ ಆಜ್ಞೆಗಳು ಸಹ ಇರುತ್ತವೆ. ಮುಂದಿನ ವಚನದಲ್ಲಿ, ಮೋಸಗಾರರೂ, ಹಾಗೂ "ಕ್ರಿಸ್ತ ವಿರೋಧಿಗಳ"[5] ಬಗ್ಗೆ ಎಚ್ಚರಿಕೆ ನೀಡಲಾಗಿದೆ. ಸುಳ್ಳು ಬೋಧನೆ ಮಾಡುವದು ಸಹ, ಒಬ್ಬರನ್ನೊಬ್ಬರು ಪ್ರೀತಿಸುವ ವಿಚಾರಕ್ಕೆ ವಿರೋಧವಾಗಿರುತ್ತದೆ.

ಆದ್ದರಿಂದ ಕ್ರೈಸ್ತರ ಗುರಿಗೆ ಮತ್ತೊಂದನ್ನು ಸೇರಿಸಬೇಕಿದೆ: ಆತನ *ಆಜ್ಞೆಗಳನ್ನು* ಕೈಕೊಂಡು ಸತ್ಯದಲ್ಲಿ ಮುನ್ನಡೆಯಬೇಕು.[6]

ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂದು ಹೇಳುವ ವಿಚಾರದೊಂದಿಗೆ, ಮಾತ್ರವಲ್ಲದೆ ಇತರೆ ಯಾವ ಆಜ್ಞೆಗಳನ್ನು ಪಾಲಿಸಬೇಕು. ಜೀವಿತದಲ್ಲಿ ಅನೇಕ ಗುರಿಗಳಿದ್ದರೂ ನಾವು ಆತನ ಆಜ್ಞೆಗಳನ್ನು ಪಾಲಿಸಬೇಕು, ಅದು ದೇವರ ಚಿತ್ತವಾಗಿದೆ!

## ಕ್ರಿಸ್ತನ ಬೋಧನೆ ಅಥವಾ ಸಿದ್ಧಾಂಥದಲ್ಲಿ ಇರಬೇಕೆಂಬ ಒಂದು ಸವಾಲು

> ಮನುಷ್ಯನಾಗಿ ಬಂದಿರುವ ಯೇಸು ಕ್ರಿಸ್ತನನ್ನು ಒಪ್ಪದೆ ಇರುವ ಮೋಸಗಾರರು ಅನೇಕ

ಮಂದಿ ಹೊರಟು ಲೋಕದೊಳಗೆ ಹೋಗಿದ್ದಾರೆ. ಯೇಸುವನ್ನು ಒಪ್ಪದವನು ಮೋಸಗಾರನೂ ಕ್ರಿಸ್ತವಿರೋಧಿಯೂ ಆಗಿದ್ದಾನೆ (2 ಯೋಹಾನ 7).

ಏಕೆ ಜನರು ಈ ಆಜ್ಞೆಗಳನ್ನು ಪಾಲಿಸಬೇಕು ಎಂದು ಯೋಹಾನನು ತಿಳಿಸಿದನು? ಏಕೆಂದರೆ ಅನೇಕ ಮೋಸಗಾರರು ಹೊರಟು ಲೋಕದೊಳಗೆ ಹೋಗಿದ್ದಾರೆ (2 ಯೋಹಾನ 7ಎ). ಮನುಷ್ಯನಾಗಿ ಕ್ರಿಸ್ತನು ಬರಲಿಲ್ಲ ಎಂಬ ಬೋಧನೆಯನ್ನು ಅವರು ಬೋಧಿಸುತ್ತಿದ್ದರು (2 ಯೋಹಾನ 7ಬಿ).[7]

ಸುಳ್ಳು ಬೋಧಕರ ಹಾಗೂ ಮೋಸಗಾರರ ಕುರಿತು ಅವರು ಎಚ್ಚರವಾಗದಿದ್ದರೆ, ಅವರು ಹೊಂದತಕ್ಕ ಆಶೀರ್ವಾದಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿತ್ತು (2 ಯೋಹಾನ 8). ಅವರು ನಂಬಿಗಸ್ತಿಕೆಯ ಸೇವೆಯನ್ನು ಮಾಡಿದ್ದರಿಂದ, ಹಿಂಸೆಯ ನಡುವೆಯು ಯೋಗ್ಯರಾಗಿರಬೇಕಿತ್ತು. ಒಂದು ವೇಳೆ ಅವರು ಸುಳ್ಳು ಬೋಧಕರ ನಿಮಿತ್ತ ಹಿಂಜರಿದರೆ, ಅವರು ಬರತಕ್ಕ ಪ್ರತಿಫಲವನ್ನು ಕಳಕೊಂಡು ನಾಶವಾಗುವ ಸಾಧ್ಯತೆಯಿತ್ತು.

ವಂಚನೆಯ ಸಂಗತಿಗಳಿಂದ ಅವರು ಹೇಗೆ ತಪ್ಪಿಸಿಕೊಳ್ಳಬೇಕು? ಕ್ರಿಸ್ತನಲ್ಲಿರುವದರಿಂದಲೇ! ಇದರಲ್ಲಿ ಎರಡು ಪ್ರಮುಖ ಅಂಶಗಳಿವೆ.

**ದೇವರೊಂದಿಗಿನ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಬೇಕು (2 ಯೋಹಾನ 9)**

ಆತನಲ್ಲಿ ನೆಲೆಗೊಳ್ಳುವದು ಗಂಭೀರ ವಿಚಾರವಾಗಿದೆ. "ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ[8] ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ" (2 ಯೋಹಾನ 9)[9] ಮತ್ತು ಅವನು ದೇವರಲ್ಲಿ ಇರುವದಿಲ್ಲ.

"ಕ್ರಿಸ್ತನ ಯಾವ ಬೋಧನೆಗಳಲ್ಲಿ" ನೆಲೆಗೊಂಡಿರಬೇಕು? ಕ್ರಿಸ್ತನ ಕುರಿತಾದ ನಂಬಿಕೆಯಲ್ಲಿ ಎಂಬದು ಕೆಲವರ ಅಭಿಪ್ರಾಯ: ಆತನು ದೇವರ ಮಗನೆಂದು ಮಾನವನಾಗಿ ಬಂದನೆಂದು ಹಾಗೂ ಕ್ರಿಸ್ತನ ಮೂಲ ಬೋಧನೆಗಳು ಇದರಲ್ಲಿ ಅಡಕವಾಗಿವೆ.[10] ಹೌದು ಶಿಷ್ಯರಿಂದ ವರ್ಣವಣೆಗೊಂಡ ಸತ್ಯಗಳು ಹೊಸ ಒಡಂಬಡಿಕೆಯಲ್ಲಿನ ಕ್ರೈಸ್ತ ಸಿದ್ಧಾಂಥಗಳು[11] ಇವುಗಳ ಹೊರತಾಗಿ ನಾವು ದೇವರ ಅನ್ಯೋನ್ಯತೆಯಲ್ಲಿ ಇರುವದು ಸಾಧ್ಯವಿಲ್ಲ.

**ಸುಳ್ಳು ಬೋಧಕರುಗಳನ್ನು ಪ್ರೋತ್ಸಾಹಿಸಬಾರದು**

ಸುಳ್ಳು ಬೋಧಕರುಗಳನ್ನು ಪ್ರೋತ್ಸಾಯಿಸದೆ ಇದ್ದರೆ, ನಾವುಗಳು ಕ್ರಿಸ್ತನ ಬೋಧನೆಗಳಲ್ಲಿ ನೆಲೆಗೊಂಡಿದ್ದೇವೆ,

> ಈ ಉಪದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿ ಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗರನಾಗುತ್ತಾನೆ (2 ಯೋಹಾನ 10, 11).

*ಬೋಧನೆಗಳು.* ಯೋಹಾನನ ದಿವಸದವರು ಸತ್ಯ ಬೋಧನೆಗಳನ್ನು ಅಳವಡಿಸಿಕೊಂಡರು? ಆದಿ ಸಭೆಯವರು ಸೌವಾರ್ತಿಕರನ್ನು ಕಳುಹಿಸಿದರು. ಅವರು ಪ್ರಯಾಣ ಮಾಡಿ ಅಪೊಸ್ತಲರ ಬೋಧನೆಗಳನ್ನು ಇತರ ಸಭೆಗಳಿಗೆ ತಲುಪಿಸಿದರು. ಸಭೆಗಳವರು ಅವರಿಗೆ ಅತಿಥ್ಯನೀಡಿ ಹಣದ ಸಹಾಯ ನೀಡಿ, ಮುಂದಿನ ಸಭೆಗಳಿಗೆ ಕಳುಹಿಸಿದರು. ಮೂರನೇ ಪತ್ರಿಕೆಯಲ್ಲಿ ಯೋಹಾನನು ಇಂಥವರ ಸಹಾಯಿಸಬೇಕೆಂದು ಸಭೆಗಳ ವರಿಗೆ ಮನವಿ ಮಾಡಿದನು. ಸಹೋದರರಿಗೆ ಸಹಾಯ ಮಾಡುವದರಿಂದ, ಅವರು ಸಹ ಜೊತೆ ಕೆಲಸದವರಾದರು ಎಂದು ತಿಳಿಸಿದನು (3 ಯೋಹಾನ 8).

ಹೇಗೂ, ಈ ನಂಬಿಗಸ್ತರಾದ ಸೇವಕರಂತೆ, ಸುಳ್ಳು ಬೋಧಕರು ಸಹ ಪ್ರಸಿದ್ಧ ಹೊಂದಿದ್ದರು. ಅವರು ತಾವು ಮೋಸಗಾರರೆಂದು ಪ್ರಚುರ ಪಡಿಸಿಕೊಳ್ಳಲಿಲ್ಲ, ಅಥವಾ ತಾವು ಸುಳ್ಳು ಬೋಧಕರೆಂದು ಗ್ರಹಿಸಿಕೊಳ್ಳಲಿಲ್ಲ ಆದರೆ ಅವರು ಕ್ರಿಸ್ತನು ಮಾನವನಾಗಿ ಬಂದನು ಎಂಬ ಅಂಶವನ್ನು ತಿರಸ್ಕರಿಸಿದ ಸುಳ್ಳು ಪ್ರವಾದಿಗಳಾಗಿದ್ದರು (2 ಯೋಹಾನ 7). ಸತ್ಯವನ್ನು ಪ್ರಕಟಿಸಿದವರಂತೆ, ತಾವುಗಳು ಸಹ ಕ್ರೈಸ್ತರಿಂದ ಸಹಾಯ ಪಡೆಯಲು ಪ್ರಯತ್ನಿಸಿದರು.

ಅಂಥವರು ನಿಮ್ಮ ಬಳಿಗೆ ಬಂದರೆ, ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, "ಶುಭವಾಗಲೀ ... ಎಂದು ಹೇಳಬೇಡಿರಿ"[12] ಅಂದರೆ ಅವನ ಸುಳ್ಳಿಗೆ ಸಹಾಯ ಮಾಡಬೇಡಿರಿ ಎಂಬ ಅರ್ಥ ವಾಗಿದೆ: ಈ ಸಂದೇಶವನ್ನು ಸಭೆಗೆ ಅವನು ಬರೆದಿದ್ದರೆ, ಅಂಥಹ ಸಭೆಯವರು. ಇಂಥಹ ಮೋಸಗಾರರನ್ನು ಅನುಮೋದಿಸಬಾರದು ಎಂಬದೇ.

ಹೌದು. ಅಂಥವರಿಗೆ ಸಹಾಯಿಸಿದರೆ, ಅವನ ದುಷ್ಕೃತ್ಯದಲ್ಲಿ ಪಾಲುಗಾರನಾಗುತ್ತಾನೆ (2 ಯೋಹಾನ 11). ಆತ್ಮಗಳ ನಾಶನಕ್ಕೆ ಅವರೇ ಹೊಣೆಯಾಗಿದ್ದಾರೆ. ನ್ಯಾಯ ತೀರ್ಪಿನ ದಿನದಲ್ಲಿ, "ನಾನು ಅಂಥವನಿಗೆ ಸಹಾಯ ಮಾಡಿದ್ದರಿಂದ, ಆತ್ಮಗಳು ನಾಶವಾದವು ಎಂಬ ಅರಿವಾಗುತ್ತದೆ"!

*ಪ್ರಚಲಿತ ಬೋಧನೆಗಳು.* ಬೋಧನೆಗಳನ್ನು ನಾವುಗಳು ಹೇಗೆ ಅನುಸರಿಸಬೇಕು? ಹೌದು ಸುಳ್ಳು ಬೋಧಕರನ್ನು ಸಂಧಿಸುವಾಗ, ಅವರನ್ನು "ವಂದಿಸಬಾರದು" ಎಂಬ ತತ್ವವಲ್ಲ. ಅಂಥವರಿಗೆ ಒಂದು ತಂಬಿಗೆ ನೀರು ಕೊಡಬಾರದು ಎಂಬ ತತ್ವವೂ ಆಗಿರುವದಿಲ್ಲ. ಅಂಥವರಿಗೆ "ಕರ್ತನ ಮಾರ್ಗವನ್ನು" ಬೋಧಿಸುವ ಅವಕಾಶವನ್ನು ಕಳಕೊಳ್ಳ ಬಾರದು (ಅಪೊಸ್ತಲರ ಕೃತ್ಯಗಳು 18:26).

ಸತ್ಯವನ್ನು ಬೋಧಿಸುವವರು ಮಾತ್ರ ಸಭೆಗಳಲ್ಲಿ ಬೋಧಿಸಬೇಕು ಎಂಬ ತಾತ್ಪರ್ಯವನ್ನು ಯೋಹಾನನು ತಿಳಿಸಿದ್ದಾನೆ. ನಾವೆಲ್ಲರೂ ಈ ಸಂದೇಶವನ್ನು ಮನ್ನಿಸಬೇಕಿದೆ.

ಸುಳ್ಳು ಬೋಧಕರಿಗೆ ಸಹಾಯಿಸಿ ಎಂದು ನಾನು ವೈಯಕ್ತಿಕವಾಗಿ ಹೇಳಲಾರೆ ಸಂಘ ಸಂಸ್ಥೆಗಳ ಕುರಿತು ಹೇಳಲು ಬರುವವರಿಗೆ, ನಾನು ಮಾತನಾಡುತ್ತೇನೆ. ಅವರು ಬಾಯಾರಿದ್ದರೆ, ಕುಡಿಯಲು ಏನನ್ನಾದರು ನೀಡುತ್ತೇನೆ. ಅವರನ್ನು ಪರಿವರ್ತಿಸಲು ಸಾಧ್ಯವಾದರೆ, ಅವರನ್ನು ಆಹ್ವಾನಿಸುತ್ತೇನೆ. ಅವನ ಕೆಲಸವನ್ನು ಸಾಧಿಸಲು ಯಾವುದೇ ಕಾರ್ಯವನ್ನು ಮಾಡಲಾರೆ. ಸುಳ್ಳು ಬೋಧಕರು ನೀಡುವ ಮುದ್ರಿತ ಪತ್ರಗಳನ್ನು ತೆಗೆದುಕೊಂಡರೂ, ಅವರಿಗೆ ಯಾವುದೇ ವಿಧವಾದ ಹಣ ಸಹಾಯ ಮಾಡಲಾರೆ. ಇದೇ ವಿಧದಲ್ಲಿ ಸಕಲ ಕ್ರೈಸ್ತರು ಸುಳ್ಳು ಬೋಧಕರನ್ನು ಪ್ರೊತ್ಸಾಯಿಸಬಾರದು.

**ನಾವುಗಳು ಪರಿಹಾರದ ಒಂದು ಭಾಗವಾಗಿರಬೇಕು**

ವಚನಗಳು 10 ಮತ್ತು 11ರಲ್ಲಿ ಕ್ರೈಸ್ತ ಸೇವೆಗೆ ಉಂಟಾಗಬಹುದಾದ ದೊಡ್ಡ ಅಡಚಣೆಯ ಬಗ್ಗೆ ಯೋಹಾನನು ತಿಳಿಸಿರುವನು. ಸುಳ್ಳು ಬೋಧನೆ ದೊಡ್ಡ ಅಡಚಣೆಯಾಗಿದೆ, ಅದರ ಬಗ್ಗೆ ನಾವುಗಳು ಎಚ್ಚರವಾಗಿರಬೇಕು.[13] ಅದಕ್ಕೆ ಎರಡು ವಿಧವಾದ ಪರಿಹಾರಗಳಿವೆ: (1) ಕ್ರಿಸ್ತನ ಬೋಧನೆಗಳಲ್ಲಿ ನೆಲೆಗೊಂಡಿರಬೇಕು, ಮತ್ತು (2) ಸುಳ್ಳು ಬೋಧನೆಗೆ ಸಹಕರಿಸಬಾರದು. *ಕ್ರಿಸ್ತನ ಬೋಧನೆ ಹಾಗೂ ಆಜ್ಞೆಗಳಲ್ಲಿ ನೆಲೆಗೊಳ್ಳಬೇಕು.*

## ಮುಕ್ತಾಯ

ಸತ್ಯವನ್ನು ಪ್ರಚುರ ಪಡಿಸುವದು ಮಾತ್ರ ಕ್ರೈಸ್ತರ ಉದ್ದೇಶವಲ್ಲ. ಬೋಧನೆಯಂತೆ ಜೀವಿಸುವದು, ಕ್ರೈಸ್ತ ಸದ್ಗುಣಗಳನ್ನು ಪಾಲಿಸುವದು, ಪ್ರಾರ್ಥನೆಯೊಂದಿಗೆ, ದೇವರ ಸಮೀಪ ನಡೆಯುವದು ವಾಕ್ಯಧ್ಯಾನ, ಆರಾಧನೆ, ಇತರರಿಗೆ ಹಿತಕಾರಿಗಳಾಗಿರಬೇಕು (ಗಲಾತ್ಯ 6:10). ದೇವರ ವಾಕ್ಯವನ್ನು ಹೇಳುವದೇ ಆಗಿದ್ದು ಅದನ್ನು ಪಾಲಿಸದೆ ಇರುವದನ್ನು

ಯೋಗ್ಯವಾದ ಆರಾಧನೆಯನ್ನು;[14] ಮಾಡದೆ ಇರುವದನ್ನು ಸಂಪ್ರದಾಯಗಳನ್ನು ದೇವರ ವಾಕ್ಯವು ನಿರಾಕರಿಸುತ್ತದೆ.[15]

ದೇವರ ಕೃಪೆ ಮತ್ತು ಸತ್ಯಕ್ಕೆ ವಿರೋಧವಾಗಿ ಬೋಧನೆ ಮಾಡುವ ಸುಳ್ಳು ಬೋಧಕರ ಸಿದ್ಧಾಂಥಗಳನ್ನು ಅಂಗೀಕರಿಸುವದು, ಪಾಪ ಪ್ರಜ್ಞೆಯಾಗಿದೆ. ಸಿದ್ಧಾಂಥವನ್ನು ಬೋಧಿಸಬಹುದು ಅಥವಾ ಕ್ರೈಸ್ತ ಜೀವಿತವನ್ನು ಪಾಲಿಸಬಹುದು ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಬೇಕು. ಸತ್ಯದ ಕುರಿತಾದ ಬೋಧನೆಗಳನ್ನು ಬೋಧಿಸಿ, ಪ್ರೀತಿ, ಹಾಗೂ ಪರಿಶುದ್ಧತೆಯನ್ನು ಪಾಲಿಸುವಂಥ ಯೋಹಾನನ ಮಾರ್ಗದರ್ಶವನ್ನು ನಾವುಗಳು ಅನುಸರಿಬೇಕು. "ಕೃಪೆಯೂ,ಕರುಣೆಯೂ, ಶಾಂತಿಯೂ ಸತ್ಯ ಪ್ರೀತಿಯೂ ನಮ್ಮೊಂದಿಗಿರಲಿ ಎಂದಿರುವನು" (2 ಯೋಹಾನ 3). ಸತ್ಯ ಮತ್ತು ಪ್ರೀತಿ ಎರಡು ಸಹ ಪ್ರಮುಖ ಅಂಶಗಳಾಗಿವೆ. ಇದರ ಕುರಿತು ರಿಚರ್ಡ್ ಪೆಕ್‌ಟಾಲ್‌ರವರು ಬರೆದು:

> ಕೆಲವು ಸಾರಿ ಪ್ರಮುಖ ಗುರಿಯಿಂದ ತಪ್ಪಿ ಹೋಗಬಹುದು. ಸತ್ಯ ಎಂಬುದನ್ನು ಬೋಧಿಸಿ, ಪ್ರೀತಿಯ ಕುರಿತಾಗಿ ವಿರೋಧವಾಗಬಹುದು. ಜನರನ್ನು ತಪ್ಪುದಾರಿಗೆ ಎಳೆಯಬಹುದು. ಇನ್ನೊಂದು ವಿಧದಲ್ಲಿ ಪ್ರೀತಿ, ಪಾಪಕ್ಷಮೆ ಸ್ವೀಕಾರದ ಬಗ್ಗೆ ತಿಳಿಸಿ ವೃದ್ಧಿಪಡಿಸಬಹುದು, ಇದರಿಂದ ಸತ್ಯಕ್ಕಾಗಿ ನಿಲ್ಲಿಸಬಹುದು. ಈ ಎರಡು ತೀವ್ರತೆಯಿಂದ ಹೊರ ಬಂದು ಪ್ರೀತಿ ಹಾಗೂ ಸತ್ಯವನ್ನು ಅನುಸರಿಸಬೇಕು.[16]

ಸತ್ಯದ ಬೋಧನೆ ಹಾಗೂ ಪ್ರಸಂಗ ಪ್ರಮುಖವಲ್ಲವೇ? ಪ್ರಸಕ್ತವಾಗಿ, ಪರಿಪೂರ್ಣ ಸತ್ಯವನ್ನು ಪ್ರಸಂಗಿಸದವನು ಗಂಭೀರವಾದ ಅಪರಾಧಿಯಾಗಿದ್ದಾನೆ. ಸತ್ಯವನ್ನು ಬೋಧಿಸಿ, ಧರ್ಮದ ಮರ್ಮವನ್ನು ಕಾಪಾಡೋಣ.

---

ಟಿಪ್ಪಣಿಗಳು

[1]2ನೇ ಪತ್ರಿಕೆಗಿಂತಲೂ, 3ನೇ ಪತ್ರಿಕೆ, ಹೊಸ ಒಡಂಬಡಿಕೆಯಲ್ಲಿನ ಅತಿ ಚಿಕ್ಕ ಪುಸ್ತಕವಾಗಿದೆ. (Henry Clarence Thiessen, *Introduction to the New Testament* [Grand Rapids, Mich.: Wm. B. Eerdmans Publishing Co., 1943], 313.) [2]ಸಭೆ, ರಕ್ಷಣೆ, ಮತ್ತು ಆರಾಧನೆ ಕುರಿತ ಬೋಧನೆಯನ್ನು "ಸಿದ್ಧಾಥ" ಎನ್ನಲಾಗಿದೆ. ಹೊಸ ಒಡಂಬಡಿಕೆಯಲ್ಲಿ "ಸಿದ್ಧಾಂಥ ಬೋಧನೆಯನ್ನು" ಸೂಚಿಸುತ್ತದೆ. ಅದು ಕೈಸ್ತನ ಜೀವಿತ ವಿಧಾನ, ವಿವಾಹ, ಕುಟುಂಬ ಮತಿತ್ತರ ವಿಷಯಗಳ ಭೋದನೆಯಾಗಿರಬಹುದು. [3]ಆಯ್ಕೆಯಾದ ಸ್ತ್ರೀ ಎಂದರೆ ಒಬ್ಬ ವ್ಯಕ್ತಿಯೆಂದು ನಂಬಿದವರಲ್ಲಿ Guy N. Woods, *A Commentary on the New Testament Epistles of Peter, John, and Jude* (Nashville: Gospel Advocate Co., 1983), 338-39. ಸಭೆಯೆಂದು ನಂಬಿದವರಲ್ಲಿ Thomas F. Johnson, *1, 2, and 3 John,* New International Biblical Commentary (Peabody, Mass.: Hendrickson Publishers, 1993), 147, and J. W. Roberts, *The Letters of John,* The Living Word Commentary (Austin, Tex.: R. B. Sweet Co., 1968), 150. "ಆಯ್ಕೆಯಾದ ಸ್ತ್ರೀ" ಸಭೆಯಾದರೆ ಮುಕ್ತಾಯದಲ್ಲಿ ಇರುವ ಶುಭ ವಚನಗಳು ಮತ್ತೊಂದು ಸಭೆಯಿಂದ ಹೇಳಿರಬಹುದು. [4]3ನೇ ಯೋಹಾನನು 3ರಲ್ಲಿ "ಸತ್ಯವಂತನಾಗಿ ನಡೆಯುವನೆಂದು" ಗಾಯನು ಕುರಿತು ಹೇಳಿದ್ದನ್ನು ಹೋಲಿಸಿ. [5]ಕ್ರಿಸ್ತ ವಿರೋಧಿ ಅಂದರೆ "ಕ್ರಿಸ್ತನ ವೈರಿ" ಪದವನ್ನು ಹೊಸ ಒಡಂಬಡಿಕೆಯಲ್ಲಿ ಐದು ಸಾರಿ ಬಳಸಲಾಗಿದೆ. ಯೋಹಾನನ ಬರಹಗಳಲ್ಲಿ ಕಂಡು ಬರುತ್ತದೆ. (1 ಯೋಹಾನ 2:18, 22; 4:3; 2 ಯೋಹಾನ 7). "ಕ್ರೈಸ್ತನನ್ನು ವಿರೋಧಿಸುವವನು" "ಶತ್ರು" ಅಥವಾ "ವಿರೋಧಿ" (Noel Merideth, "False Teachers and How to Deal with Them," *Denton Lectures* [1987], 267). [6]ಆಜ್ಞೆಗಳ ಪಾಲನೆ ಎಂದರೆ "ವಾಕ್ಯಕ್ಕೆ ವಿಧೇಯರಾಗುವದು ಮತ್ತಾಯ 7:21; ಯೋಹಾನ 14:15, 21; 15:10; 1 ಯೋಹಾನ 2:4, 5; 3:22. [7]"ಗ್ನಾಸ್ಟಿಸಮ್" ಎಂಬ ತಪ್ಪು ಬೋಧನೆಯ ಬಗ್ಗೆ 1 ಯೋಹಾನ 2:18-22ರಲ್ಲಿ ತಿಳಿಸಲಾಗಿದೆ. "ಎಲ್ಲವೂ ಅಲೌಕಿಕ" ಎಂಬ ತತ್ವ. ಈ ತತ್ವದ ಪ್ರಕಾರ ದೇವರು ಮಾನವನಾಗಿ ಜನಿಸುವದು ಅಸಾಧ್ಯ. ಮತ್ತು ಯೇಸು ಮಾನವನಾಗಿ ಸದೃಷ್ಯನಾದರೆ ವಿನಃ ನಿಜವಾದ

ಮನುಷ್ಯನಾಗಿರಲಿಲ್ಲ, ಎಂಬುದು ಅವರ ನಂಬಿಕೆ. [8]KJV ಯಲ್ಲಿ "ಅತಿ ಕ್ರಮಿಸಿ" ಎಂಬ ಪದವು ಕೀಳಾದ ಗ್ರೀಕ್ ಮೂಲದಿಂದ ತೆಗೆದುಕೊಂಡು ಭಾಷಾಂತರಿಸಲಾಗಿದೆ. NIV ಯಲ್ಲಿ "ಮುಂದಕ್ಕೆ ಹೋಗುವವನು" ಮತ್ತು NRSV ಯಲ್ಲಿ "ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೊಗುವವನಲ್ಲಿಗೆ ..." ಎಂದು ಭಾಷಾಂತರಿಸಲಾಗಿದೆ NASB ಯು "ಕ್ರಿಸ್ತನ ಉಪದೇಶ ದಲ್ಲಿ ನಿಲ್ಲದೆ ಮುಂದಕ್ಕೆ ಹೋಗುವವನು ..." ಭಾಷಾಂತರಿಸಲಾಗಿದೆ. [9]ಇಲ್ಲಿ ಹೇಳಲ್ಪಟ್ಟ ಪಾಪವು ಕ್ರಿಸ್ತನ ಉಪದೇಶಕ್ಕಿಂತ ಮುಂದೆ ಹೋಗುವುದಾಗಿದೆ. ಆತನು ಕ್ರಿಸ್ತನ ಸಿದ್ಧಾಂಥದಲ್ಲಿ ನೆಲೆಗೊಂಡು ನಿಲ್ಲಲಿಲ್ಲ (ಮೇಲಿಡೆತ್ 270). [10]"ಯೇಸು ಮಾನವನಾಗಿ ಬಂದದ್ದು ಸತ್ಯವಾಗಿದೆ. ಎಂಬ ಉಪದೇಶ ವನ್ನು ತಂದಿದ್ದಿರಲ್ಲಾ ಎಂದು ಪರೀಕ್ಷೆಯಾಗಿದೆ" (Johnson, 158; ಒತ್ತಿ ಹೇಳಿದ್ದಾಗಿದೆ).

[11]ಒಬ್ಬ ವಾಖ್ಯಾನ ಕರ್ತನು "ಸಿದ್ಧಾಂಥ" ಕ್ರಿಸ್ತನ [ಬೋಧನೆ NASB] (KJV) ಎಂಬುದು "ಕಿಸ್ತು ತಂದ ಬೋಧನೆ" ಮೊದಲನೆಯದಾಗಿ ಆತನೇ ತಂದದ್ದು ಆತನ ಶಿಷ್ಯರ ಮೂಲಕ ಕೊಟ್ಟಿದ್ದಾಗಿದೆ (ಇಬ್ರಿಯ 2:3) ... ಹೊಸ ಒಡಂಬಡಿಕೆಯಲ್ಲಿ ಈ ಬಳಕೆಯು ಒಂದೇ ತರದಾಗಿದೆ. (Brooke Foss Westcott, *The Epistles of St. John* [London: William Clowes and Sons, 1883; reprint, Grand Rapids, Mich.: Wm. B. Eerdmans Publishing Co., 1966], 230.) J. W. Roberts ಎಂಬಾತನು, ಅನೇಕ ವಾಖ್ಯಾನ ಕತೃ ಕ್ರಿಸ್ತನ ಉಪದೇಶವೆಂದರೆ ಕ್ರಿಸ್ತ ಬೋಧಿಸಿದ ಬೋಧನೆಂದು ನಂಬಿರುವರು. ಆದರೆ ಆತನು "ಕ್ರಿಸ್ತನ ಕುರಿತ ಬೋಧನೆ" ಆಗಿರ ಬಹುದೆಂದು ಒಪ್ಪಿಕೊಂಡಿದ್ದಾರೆ (Roberts, 163-64). [12]ಅವರಿಗೆ ವಂದನೆಯನ್ನು ತಿಳಿಸು (ವಚನ 10) ಎಂದು NASB ಯಲ್ಲಿ ಭಾಷಾಂತರಿಸಿದ್ದು "ಬೀಳ್ಕೊಡು" ಎಂದು KJV ಯಲ್ಲಿ ಮತ್ತು ಆಹ್ವಾನಿಸು ಎಂದು NIVಯಲ್ಲಿ ಬಳಕೆಯಾಗಿದೆ. ಜಾನ್ಸ್‌ರವರ ಪ್ರಕಾರ, ವಂದನೆಗಳದಿಗೆ ಸಹಾಯ, ಸಹಕಾರ, ಸೇವೆಯು ಒಳಗೊಂಡಿರುತ್ತದೆ. (Johnson, 159.) [13]ನೋಡಿ ಮತ್ತಾಯ 7:15; 24:24; ಅಪೊಸ್ತಲರ ಕೃತ್ಯಗಳು 20:29, 30; 1 ತಿಮೊಥೆ 4:1, 2; 2 ತಿಮೊಥೆ 4:1-4; 2 ಪೇತ್ರ 2:1; 1 ಯೋಹಾನ 2:18; 4:1; ಯೂದ 4. [14]ನೊಡಿ ಮತ್ತಾಯ 7:21-27; ಯೋಕೊಬ 1:22-25; 2:14-17. [15]ನೋಡಿ ಯೆಶಾಯ 1:10-17; ಮೀಕಾ 6:6-8; ಮತ್ತಾಯ 23:14, 23-28. [16]Richard Pectol, "Love in the Truth," *The Preacher's Periodical* 6 (November 1985): 14.